ಇ.ಪಿ.ನಂ. ೧೩/೨೦೦೭

ಆರ್.ಡಬ್ಲ್ಯೂ: ೧
ಜೆ.ಡಿ.ನಂ: ೨

*ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.*
*ದಿನಾಂಕ: ೧೮-೧೧-೨೦೧೭*

<u>ಪಾಟೀ ಸವಾಲು: *ಶ್ರೀ ಆರ್.ಡಿ.ಟಿ. ವಕೀಲರಿಂದ:*</u>

ಅಣ್ಣಾಗೌಡ ಜ್ಯೋತಿಗೌಡ ಪಾಟೀಲ ಅವರ ಮನೆತನದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿಯವರು ಮೃತವಾಗಿದ್ದಾರೆ. ಅಣ್ಣಾಗೌಡ ಹಾಗೂ ಮಧುಕರ ಕುಲಕರ್ಣಿ ಇವರ ನಡುವೆ ಕರಾರು ಪತ್ರದ ಸಲುವಾಗಿ ಈ ನ್ಯಾಯಾಲಯದಲ್ಲಿ ದಾವೆ ಇತ್ತು ಎಂದರೆ ಸರಿ. ಓ.ಎಸ್.ನಂ. *೮೫/೧೯೮೮* ದಾವೆ ವಜಾಗೊಂಡ ನಂತರ ಅದನ್ನು ಪ್ರಶ್ನಿಸಿ ಅಣ್ಣಾಗೌಡ ಇವರು ಮೇಲ್ಮನವಿ ನಂ. *೪೦/೯೨* ರಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪೀಲು ಇನ್ನು ಚಾಲ್ತಿಯಲ್ಲಿರುವಾಗ ನಾವು ಮಧುಕರ ಕುಲಕರ್ಣಿ ಇವರಿಂದ ದಾವಾ ಆಸ್ತಿಯನ್ನು ನಾನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ಕೇಸು ಮುಗಿದ ನಂತರ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆರ್.ಎ.ನಂ.*೪೦/೧೯೯೨* ರಲ್ಲಿ ನಾನು ಪಕ್ಷಗಾರಳಿದ್ದೆ ಹಾಗೂ ನನಗೂ ನೋಟೀಸು ಬಂದಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್.ನಂ. *೮೫/೧೯೮೮* ಮತ್ತು ಆರ್.ಎ.ನಂ.*೪೦/೯೨* ರಲ್ಲಿ ಮತ್ತು ಆರ್.ಎಸ್.ಎ.ನಂ.*೧೮೨/೨೦೦೬* ಮತ್ತು ಆರ್.ಎಸ್.ಎ.ನಂ. *೨೯೯/೨೦೦೫* ಇವುಗಳಲ್ಲಿ ಮಧುಕರ ಕುಲಕರ್ಣಿ ಇವರ ವಾರಸುದಾರರು ನಮ್ಮದು ಹಕ್ಕು ಇರುತ್ತದೆ ಅಂತ ಯಾರು ಅರ್ಜಿ ಹಾಕಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಧ್ಯಂತರ ಅರ್ಜಿ ನಂ. *೪* ರಲ್ಲಿ ತಿಳಿಸಿರುವ *೧೦* ಜನರು ನಮಗೆ ದಾವಾ ಆಸ್ತಿ ಬೇಕು ಅಂತ ದಾವೆ ಮಾಡಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಮೇಲಿನ ಮೊಕದ್ದಮೆಗಳು ನಡೆದ ಬಗ್ಗೆ ಈ ಮೇಲಿನ *೧೦* ಜನರಿಗೆ ಗೊತ್ತಿರುತ್ತದೆ. ನಾನು *೧೦* ಜನರಿಗೆ ಮಧುಕರ ಕುಲಕರ್ಣಿ ರವರಿಂದ ದಾವಾ ಆಸ್ತಿಯನ್ನು ಖರೀದಿ ತೆಗೆದುಕೊಂಡ ಬಗ್ಗೆ ಹೇಳಿರುತ್ತೇನೆ. ಈಗ ದಾವಾ ಆಸ್ತಿಯ ಉತಾರೆಯಲ್ಲಿ ನನ್ನ ಹೆಸರು ಇರುತ್ತದೆ. ಅದಕ್ಕೆ ಮಧ್ಯಂತರ ಅರ್ಜಿ ನಂ. *೪* ರಲ್ಲಿರುವ *೧೦* ಜನರು ಯಾರು ತಕರಾರು ಮಾಡಿರುವುದಿಲ್ಲ. ಮಧ್ಯಂತರ ಅರ್ಜಿ ನಂ. *೪* ರಲ್ಲಿರುವ *೧೦* ಜನರ ಯಾವುದೇ ಪಾಲು ದಾವಾ ಆಸ್ತಿಯಲ್ಲಿ ಇರದೇ ಇದ್ದುದರಿಂದ ಅವರು ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ನಾನು ಮಧುಕರ ಕುಲಕರ್ಣಿ ಇವರ ವಾರಸುದಾರರು ಇಂತವರೇ ಇರುತ್ತಾರೆ ಅಂತ ತಹಸಿಲ್ದಾರ ರವರಿಂದ ವಾರಸಾ ಪ್ರಮಾಣ ಪತ್ರವನ್ನು ಈ ದರ್ಕಾಸ್ತಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಧ್ಯಂತರ ಅರ್ಜಿ ನಂ. *೪* ರಲ್ಲಿರುವ *೧೦* ಜನರು ನಾವು ಮಧುಕರ ಕುಲಕರ್ಣಿರವರ ವಾರಸುದಾರರು ಇರುತ್ತೇವೆ ಅಂತ ತಹಸಿಲ್ದಾರವರಿಗೆ ಅರ್ಜಿ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಮೇಲಿನ *೧೦* ಜನರು ಮಧುಕರ ಕುಲಕರ್ಣಿ ರವರಿಗೆ ಸಂಬಂಧ ಪಡದೇ ಇರುವುದರಿಂದ ಅವರು ತಹಸಿಲ್ದಾರ ಇವರಿಗೆ ಅರ್ಜಿ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಮೇಲಿನ *೧೦* ಜನರು ಮಧುಕರ

ಇ.ಪಿ.ನಂ. ೧೩/೨೦೦೭

ಆರ್.ಡಬ್ಲ್ಯೂ ೧

ಜೆ.ಡಿ.ನಂಃ ೨

ಕುಲಕರ್ಣಿ ರವರ ವಾರಸುದಾರರು ಇರದೇ ಇದ್ದರು ಮಧ್ಯಂತರ ಅರ್ಜಿ ನಂ. ೪ ನ್ನು ಖೊಟ್ಟಿಯಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮಧುಕರನ ಸಹೋದರ ಲಕ್ಷ್ಮಣ ಅಂತ ಇರುತ್ತಾರೆ ಎಂದರೆ ಸರಿ. ಲಕ್ಷ್ಮಣ ಇವನ ದಾವಾ ಆಸ್ತಿಯ ಸರ್ವೆ ನಂ. ೬೪/೨ ಮಾಂಗನೂರು ಗ್ರಾಮದ ಜಮೀನಿನಲ್ಲಿ ಅರ್ಧ ಹಿಸ್ಸೆಯನ್ನು ಅಣ್ಣಾಗೌಡ ಇವನು ಖರೀದಿಸಿರುತ್ತಾನೆಂದರೆ ಸರಿ. ಸರ್ವೆ ನಂ. ೬೨/೨ ರಲ್ಲಿ ಅಣ್ಣಾಗೌಡನ ಇಬ್ಬರು ಮಕ್ಕಳ ಹೆಸರುಗಳು ದಾಖಲು ಇರುತ್ತೇವೆ ಎಂದರೆ ಸರಿ. ನಾನು ಮಧ್ಯಂತರ ಅರ್ಜಿ ನಂ. ೪ ರಲ್ಲಿ ನಮೂದಿಸಿದ ೧೦ ಜನರು ನ್ಯಾಯಾಲಯಕ್ಕೆ ಬರಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನ್ಯಾಯಾಲಯದವರು ನಾನು ಮತ್ತು ಮಧುಕರ ಕುಲಕರ್ಣಿ ಕೂಡಿಕೊಂಡು ಅಣ್ಣಾಗೌಡನ ವಾರಸುದಾರರಿಗೆ ದಾವಾ ಜಮೀನನ್ನು ಖರೀದಿ ಕೊಡಲು ಆದೇಶ ಮಾಡಿದ್ದಾರೆ ಎಂದರೆ ಸರಿ. ಆ ಆದೇಶದ ಪ್ರಕಾರ ನಾನು ಅಣ್ಣಾಗೌಡನ ಮಕ್ಕಳು ಎಂದರೆ ದರ್ಕಾಸ್ತುದಾರರಿಗೆ ದಾವಾ ಆಸ್ತಿಯನ್ನು ಖರೀದಿ ಹಾಕಿಕೊಟ್ಟರೆ ಈ ಪ್ರಕರಣ ಮುಗಿಯುತ್ತೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಖರೀದಿ ಹಾಕಿಕೊಡುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಒಬ್ಬಳೇ ಹೆಸರು ದಾವಾ ಆಸ್ತಿಯ ಮಾಲೀಕರ ಕಾಲಂ ನಲ್ಲಿ ನಮೂದು ಇದ್ದುದರಿಂದ ನಾನು ಖರೀದಿ ಹಾಕಿಕೊಟ್ಟರೆ ಪ್ರಕರಣ ಮುಗಿಯುತ್ತೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಮುಗಿಸಬಾರದು ಎನ್ನುವ ಉದ್ದೇಶದಿಂದ ನಾನು ಮಧ್ಯಂತರ ಅರ್ಜಿ ನಂ. ೪ ನ್ನು ಖೊಟ್ಟಿಯಾಗಿ ಹಾಕಿಕೊಂಡಿರುತ್ತೇನೆಂದರೆ ಸರಿಯಲ್ಲ.

ದರ್ಕಾಸ್ತುದಾರರು ೧ ನೇ ಜೆ.ಡಿ.ದಾರನಿಗೆ ಯಾರು ವಾರಸುದಾರರು ಇಲ್ಲ ಅಂತ ಈ ಪ್ರಕರಣದಲ್ಲಿ ದಿಃ ೧೭-೦೮-೨೦೧೩ ರಂದು ಮೆಮೋ ಕೊಟ್ಟ ಬಗ್ಗೆ ಹಾಗೂ ಅದು ಮಂಜೂರು ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನಾಗಲೀ ಅಥವಾ ನಮ್ಮ ವಕೀಲರಾಗಲೀ ಸದರಿ ಮೆಮೋಗೆ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ ೧೭-೦೮-೨೦೧೩ ರಂದು ಸಲ್ಲಿಸಿದ ಮೆಮೋ ದಿಃ ೨೧-೧೧-೨೦೧೩ ರಂದು ಮಂಜೂರು ಆದ ಬಗ್ಗೆ ನಮ್ಮ ವಕೀಲರು ನನಗೆ ತಿಳಿಸಿರುವುದಿಲ್ಲ ಹಾಗೂ ಅದನ್ನು ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಾನು ಮಧ್ಯಂತರ ಅರ್ಜಿ ನಂ. ೪ ರಲ್ಲಿ ಇರುವವರು ಮಧುಕರ ಕುಲಕರ್ಣಿ ಇವರ ವಾರಸುದಾರರು ಇರುತ್ತಾರೆ ಎನ್ನುವ ಬಗ್ಗೆ ಯಾವುದೇ ಕಾಗದ ಪತ್ರಗಳನ್ನು ಸಲ್ಲಿಸಿರುವುದಿಲ್ಲ ನಾನು ಸುಳ್ಳು ಸಂಗತಿಗಳಿಂದ ಕೂಡಿದ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಈ ಮಧ್ಯಂತರ ಅರ್ಜಿ ನಂ. ೪ ನ್ನು ವಜಾಗೊಳಿಸುವುದರಿಂದ ನನಗೆ ಯಾವುದೇ ತೊಂದರೆಯಾಗುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿದಾರಳು ಸುಮ್ಮನೆ ಕುಳಿತಿರುತ್ತಾಳೆ. ಮಧ್ಯಂತರ ಅರ್ಜಿ ನಂ. ೪ ರಲ್ಲಿರುವವರ ಹೆಸರುಗಳನ್ನು ನಾನು ಹೇಳುತ್ತೇನೆ ಆದರೆ ಅವರ ತಂದೆಯ/ಗಂಡನ ಪೂರ್ಣ ವಿಳಾಸವನ್ನು ಹೇಳಲು ಬರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ಮಾಹಿತಿಗಳು ನನಗೆ

ಗೊತ್ತಿರುವುದಿಲ್ಲ ನಮ್ಮ ವಕೀಲರು ಹೇಳಿದ ಪ್ರಕಾರ ಸಹಿಯನ್ನು ಮಾಡಿರುತ್ತಾರೆಂದರೆ ಸರಿ.

ಮಧುಕರ ಕುಲಕರ್ಣಿ ಇವರು ಬ್ರಾಹ್ಮಣ ಸಮಾಜದವರು ಹಾಗೂ ನಾನು ಲಿಂಗಾಯತ ಸಮಾಜದವಳು ಎಂದರೆ ಸರಿ. ಅವರ ಹಾಗೂ ನಮ್ಮ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮಧುಕರ ಕುಲಕರ್ಣಿ ಇವನು ಪೂರ್ಣ ಮಾಲೀಕನು ಇರುವುದರಿಂದ ನಾನು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆಂದರೆ ಸರಿ. ಉತಾರೆಯಲ್ಲಿ ನನ್ನ ಹೆಸರು ಇರುವುದರಿಂದ ಹಾಗೂ ದಾವಾ ಆಸ್ತಿ ನನ್ನ ಹೆಸರಿನಲ್ಲಿ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿರುವುದರಿಂದ ನಾನೊಬ್ಬಳೇ ದಾವಾ ಆಸ್ತಿಯನ್ನು ಅಣ್ಣಾಗೌಡನ ವಾರಸುದಾರರಿಗೆ ಖರೀದಿ ಕೊಡುವ ಸಂದರ್ಭ ಬರುತ್ತದೆ ಅಂತ ಮಧ್ಯಂತರ ಅರ್ಜಿ ನಂ. ೪ ನು ಹಾಕಿರುತ್ತೇನೆಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ನಂ. ೪ ನ್ನು ಹಕಾಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಗಣಕೀಕರಣದಲ್ಲಿ ಬೆರಳಚ್ಚು ಮಾಡಲಾಯಿತು. )*

***ಓ.ಹೇ.ಕೆ. ಸರಿ ಇದೆ.***

(ವಿಜಯಕುಮಾರ ಎಸ್ ಹಿರೇಮಠ)
***ಪ್ರಧಾನ ದಿವಾಣಿ ನ್ಯಾಯಾಧೀಶರು ಚಿಕ್ಕೋಡಿ.***